ಶ್ರೀ ಬಿ. ಪಿ. ನಾಗರಾಜಮೂರ್ತಿಯವರು.—ಇಷ್ಟು ಜಾಸ್ತಿಯಾಗಿರುವುದಕ್ಕೆ P.W.D ಯವರು ಸರಿಯಾಗಿ ಕೆಲಸಮಾಡದೇಇರುವುದು ಕಾರಣ ಎಂದು ಗೊತ್ತೇ ?

(No answer)

———

Supply of Water to Hosadurga Town.

Q.—140. Sri G. BASAPPA (Hosadurga).—

Will the Government be pleased to state :—

(*a*) since how long the people of Hosadurga Town are urging for the supply of water to the town ;

(*b*) whether they have prepared any estimate for this ; if so, the amount ; and whether it has been sanctioned ?

A.—Sri Kadidal MANJAPPA (Minister for Revenue and Public Works).—

(*a*) For the past few years.

(*b*) Yes. An estimate was prepared for Rs. 5·00 lakhs. The estimate was sanctioned in November 1949.

ಶ್ರೀ ಜಿ. ಬಸಪ್ಪನವರು.—ನೀರು ಒದಗಿಸುವ ಕಾರ್ಯ ಕೈಕೊಂಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದಾಜು ಡೆಪ್ಯುಟಿ ಕಮೀಷನರವರ ಕೌಂಟರ್ ಸಿಗ್ನೇಚರ್‌ಗೆ ಹೋಗಿದೆ. ಬಂದನಂತರ ಪರಿಶೀಲನೆಮಾಡಿ ಯೋಚನೆಮಾಡುತ್ತೇವೆ ?

ಶ್ರೀ ಜಿ. ಬಸಪ್ಪನವರು.—ಟೆಂಡರ್ ಕರೆದಿದ್ದೀರಾ ?

Mr. SPEAKER.—That does not arise, because it is not countersigned. If the Hon'ble Member has any relevant supplementary he can put it.

ಶ್ರೀ ಜಿ. ಬಸಪ್ಪನವರು.—ಧರ್ಮಪ್ರವರ್ತಕರು 1ಲಕ್ಷ ರೂಪಾಯಿಗಳನ್ನು ಕೊಟ್ಟ ಮೇಲೆ ಅಲ್ಲವೇ ಈ 5ಲಕ್ಷ ರೂಪಾಯಿಗಳ ಅಂದಾಜನ್ನು ಮಂಜೂರು ಮಾಡಿದ್ದು ?

ಶ್ರೀ ಕಡಿದಾಳ್ ಮಂಜಪನವರು.—ಹೌದು.

ಶ್ರೀ ಜಿ. ಬಸಪ್ಪನವರು.—ಮಾನ್ಯ ಗೃಹ ಸಚಿವರು ಅಲ್ಲಿಗೆ ಬಂದಾಗ, 5ಲಕ್ಷ ರೂಪಾಯಿಗಳ ಬೇರೆ ಅಂದಾಜು ಮಾಡಿಸಿ ಕೆಲಸ ಮಾಡಿಸಿ ಕೊಡಬೇಕೆಂದು ಕೇಳಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಆ 5ಲಕ್ಷ ರೂಪಾಯಿಗಳ ಅಂದಾಜು ಕೌಂಟರ್ ಸಿಗ್ನೇಚರ್‌ಗೆ ಹೋಗಿದೆ.

ಶ್ರೀ ಜಿ. ಬಸಪ್ಪನವರು.—ಕೌಂಟರ್ ಸಿಗ್ನೇಚರ್ ಆಗಿ ಬಂದ ತಕ್ಷಣ ಕೆಲಸಮಾಡಿಸಿ ಕೊಡುತ್ತೀರಾ ?

Mr. SPEAKER.—The Minister has given the Member an assurance. Why does he press it ?

———

Restoration of Tank in Dinka Village.

Q.—190. Sri B. Y. NEELE GOWDA (Pandavapura).—

Will the Government be pleased to state :—

(*a*) whether there is pressure from the raiyats for restoring the tank of Dinka Village of Pandavapura Taluk ;

(*b*) the number of acres that are likely to be irrigated if restored ;

(*c*) if there is pressure from the raiyats for restoration, the action taken by them ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) 50 acres.

(*c*) An estimate amounting to Rs. 24,500 is under consideration.

ಶ್ರೀ ಬಿ. ವೈ. ನೀಲೇಗೌಡರು.—ಡಿಂಕ ಗ್ರಾಮದ ಕೆರೆ ಒಡೆದು ಎಷ್ಟು ದಿನಗಳಾದವು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಬಿ. ವೈ. ನೀಲೇಗೌಡರು.—ರೈತರು ಕೆರೆ ಕಟ್ಟಿಸಿಕೊಡಿ ಎಂಬುದಾಗಿ ಯಾವಾಗ ಸರ್ಕಾರದವರಿಗೆ ಮನವಿಮಾಡಿಕೊಂಡರು ಎಂಬುದನ್ನು ಹೇಳುವುದಕ್ಕಾಗುತ್ತಾದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.